ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ-

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ಒಂದು ಎಕ್ಸರೇ ನಿಪಿ-10 ಎಂದು, ಒಂದು ಒಳರೋಗಿ ಕಡತವನ್ನು ನಿಪಿ-11 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಎದುರುದಾರರ ಪರ ವಕೀಲರಿಂದಃ-

ನಾನು ಅರ್ಜಿದಾರರ ಗಾಯದ ಪ್ರಮಾಣ ಪತ್ರವನ್ನು ಪೊಲೀಸರಿಗೆ ಕೊಟ್ಟಿಲ್ಲ ಎಂದರೆ ಸರಿ. ಪೊಲೀಸರು ಅಪಘಾತವಾಗಿದೆ ಎಂದು ನಮ್ಮ ಆಸ್ಪತ್ರೆಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿ. ದಿನಾಂಕ 11.03.2024ರಂದು ಅರ್ಜಿದಾರರು ನಮ್ಮ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ದಿನಾಂಕ 14.03.2024ರಂದು ಆಸ್ಪತ್ರೆಯಿಂದ ಬಿಡುಗಡೆಯಾಗಿರುತ್ತಾರೆ. ದಿನಾಂಕ 14.03.2024ರಂದು ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಅರ್ಜಿದಾರರು ಹೊರೋಗಯಾಗಿ ಮುಂದುವರೆದ ಚಿಕಿತ್ಸೆಗೆ ಬಂದಿರುತ್ತಾರೆ. ನಿಪಿ-11 ಒಳರೋಗಿಯಾಗಿದ್ದಾ ನೀಡಿರುವ ದಾಖಲೆಯಾಗಿರುತ್ತದೆ. ಮುಂದುವರೆದ ಚಿಕಿತ್ಸೆ ನೀಡಿದ ಬಗ್ಗೆ ನಮೂದಾಗಿಲ್ಲ ಎಂದರೆ ಸರಿ. ಹೊರರೋಗಿಯಾಗಿ ಚಿಕಿತ್ಸೆ ನೀಡುವಾಗ ನಿಪಿ-11ರ ದಾಖಲೆಯನ್ನು ತರಿಸಿಕೊಳ್ಳುವುದಿಲ್ಲ. ಅರ್ಜಿದಾರರು ನಮ್ಮ ಬಳಿಯಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಎಂದಿಗೂ ಬಂದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ

ಎಂ.ವಿ.ಸಿ ನಂ. 83/2024ರಲ್ಲಿ
ಪಿ.ಡಬ್ಲೂ -2(ಮಧುಸೂಧನ್ ಎಸ್.ಎನ್)

ಹಚ್ಚಿನ ಪರಿಹಾರ ಸಿಗಲಿ ಎಂದು ಹೆಚ್ಚಿನ ಪ್ರಮಾಣದ ಡಿಸೆಬಿಲಿಟಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಬಲಭುಜದಲ್ಲಿ ಊತ ಇರುವುದು ಬೇರೆ ಯಾದಾದರೂ ಕಾಣ ಇರಬಹುದು ಎಂದರೆ ಸಾಕ್ಷಿ ಅವರ ಪಕ್ಕೆ ಎಲುಬು ಮುರಿದಿತ್ತು ಆದ್ದರಿಂದ ಊತ ಇತ್ತು. 3ನೇ ತರಹದ ಗಾಯಗಳು ಚಿಕಿತ್ಸೆ ಇಲ್ಲದೇ ಗುಣವಾಗುತ್ತದೆ. ಅರ್ಜಿದಾರರ ತೋಳಿನ ಮೂಳೆ ಕೂಡಿಕೊಂಡಿದೆ ಆದರೂ ಆಕೆಗೆ ತೊಂದರೆ ಇದೆ. ದಾಖಲೆಗಳ ಪ್ರಕಾರ ಅವರಿಗೆ 45 ವರ್ಷ ವಯಸ್ಸು. ಆಕೆ ಕೂಲಿ ಕೆಲಸ ಮಾಡುತ್ತಾರೆ ಎಂದು ತಿಳಿಸಿರುತ್ತಾರೆ. ಅರ್ಜಿದಾರರಿಗೆ ಆಗಿರುವ ಗಾಯಗಳು ಗುಣವಾಗಿದ್ದರೂ ಸಹ ನಾನು ಹೆಚ್ಚಿನ ಪ್ರಮಾಣದ ಅಂಗ ನ್ಯೂನ್ಯತೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಆಕೆ ದೈನಂದಿನ ಎಲ್ಲಾ ಕೆಲಸಗಳನ್ನು ಮಾಡಿಕೊಳ್ಳುವ ಸಾಮರ್ಥ್ಯ ಇದೆ ಎಂದರೆ ಸರಿಯಲ್ಲ. ಕೆಲವು ಕೆಲಸಗಳನ್ನು ಮಾತ್ರ ಮಾಡಿಕೊಳ್ಳಬಹುದು. ಮುಂದುವರೆದ ಚಿಕಿತ್ಸೆಗೆ 30 ಸಾವಿರ ಹಣ ಬೇಕಾಗುವ ಬಗ್ಗೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿ. ಆಕೆ ಸತತ ಒಂದುವರೆವರ್ಷ ಚಿಕಿತ್ಸೆ ಪಡೆದುಕೊಂಡರೆ ಅವರಿಗೆ ಉಂಟಾಗಿರುವ ತೊಂದರೆ ಗುಣವಾಗುತ್ತದೆ ಎಂದರೆ ಸರಿಯಲ್ಲ. ನಮ್ಮಲ್ಲಿ ಫಿಜಿಯೋ ತೆರಫಿ ಚಿಕಿತ್ಸೆ ಇಲ್ಲ ತೆಗೆದುಕೊಳ್ಳಲು ಶಿಫಾರಸ್ಸು ಮಾಡುತ್ತೇವೆ. ಫಿಜಿಯೋ ತೆರಫಿ ಚಿಕಿತ್ಸೆ ಪಡೆದುಕೊಂಡರೆ ಅಂಗ ನ್ಯೂನ್ಯತೆ ಪ್ರಮಾಣ ಕಡಿಮೆಯಾಗುತ್ತದೆ ಎಂದರೆ ಸರಿ.

ಮರು ವಿಚಾರಣೆ:- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)
(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು